ದೂರವಾಣಿ ಸಂಖ್ಯೆ: 080-22211707
ಫ್ಯಾಕ್ಸ್ ಸಂಖ್ಯೆ: 080-22121982

ಇಮೇಲ್: cafkptcl@gmail.com
ಜಾಲತಾಣ: www.kptcl.karnataka.gov.in

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

ಕಂಪನಿ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ,ಬೆಂಗಳೂರು – 560009

ಸಂಖ್ಯೆ:ಕವಿಪ್ರನಿನಿ/ಕೆಸಿಎ-32/40940/2022-23 /1888 ದಿನಾಂಕ: 02 AUG 2023

## ಅಧಿಕೃತ ಜ್ಞಾಪನಾ

**ವಿಷಯ:** ಆರ್ಥಿಕ ವರ್ಷ 2023-24ನೇ ಸಾಲಿನ ಕಂದಾಯ ಆಯವ್ಯಯವನ್ನು (REVENUE BUDGET) ಹಂಚಿಕೆ ಮಾಡುವ ಕುರಿತು.

**ಉಲ್ಲೇಖ:**
1. ದಿನಾಂಕ: 19.07.2023 ರಂದು ನಡೆದ ನಿಗಮದ ನಿರ್ದೇಶಕರುಗಳ ಮಂಡಳಿ ಸಭೆಯ ನಿರ್ಣಯ ಸಂಖ್ಯೆ: ಕವಿಪ್ರನಿನಿ/ಬಿ37/4437/2001-02/185 ದಿನಾಂಕ:01.08.2023.
2. ಈ ಕಛೇರಿ ಪತ್ರ ಸಂಖ್ಯೆ:ಆಸ(ಲೆ ಮತ್ತು ಸಂ)/ಕೆಸಿಎ-32/60851-57/2016-1 ದಿನಾಂಕ:25.10.2017.
3. ಈ ಕಛೇರಿ ಸುತ್ತೋಲೆ ಸಂಖ್ಯೆ:ಆಸ(ಲೆ ಮತ್ತು ಸಂ)/ಕೆಸಿಎ-32/6366/2019-2 ದಿನಾಂಕ:07.09.2019.

*****

1. ಕವಿಪ್ರನಿನಿ ನಿಗಮದ ನಿರ್ದೇಶಕರುಗಳ ಮಂಡಳಿ ಸಭೆಯ ಉಲ್ಲೇಖಿತ ನಿರ್ಣಯದಲ್ಲಿ ಅನುಮೋದಿಸಿರುವಂತೆ, ಆರ್ಥಿಕ ವರ್ಷ 2023-24ನೇ ಸಾಲಿಗೆ ರೂ.3666.31 ಕೋಟಿಗಳ ಕಂದಾಯ ಆಯವ್ಯಯವನ್ನು ಲೆಕ್ಕ ಘಟಕ/ಲೆಕ್ಕ ಶೀರ್ಷಿಕೆವಾರು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಹಂಚಿಕೆ ಮಾಡಲಾಗಿದೆ. ಹಂಚಿಕೆ ಮಾಡಿರುವ ಆಯವ್ಯಯದ ವಲಯವಾರು ಕ್ರೋಢೀಕೃತ ವಿವರಗಳು ಈ ಕೆಳಕಂಡಂತಿರುತ್ತದೆ:-

(ರೂ. ಕೋಟಿಗಳಲ್ಲಿ)

| ಕ್ರ. ಸಂ. | ವಲಯ/ಕಛೇರಿ ಹೆಸರುಗಳು | ಲೆಕ್ಕ ಗುಂಪು | | | | | ಒಟ್ಟು |
|---|---|---|---|---|---|---|---|
| | | 74 | 75 | 76 | 77.540* | 78 | |
| 1. | ಬೆಂಗಳೂರು ಪ್ರಸರಣ ವಲಯ | 125.81 | 343.76 | 22.99 | 0.50 | 0.00 | 493.06 |
| 2. | ತುಮಕೂರು ಪ್ರಸರಣ ವಲಯ | 66.52 | 210.95 | 21.59 | 0.50 | 0.00 | 299.56 |
| 3. | ಮೈಸೂರು ಪ್ರಸರಣ ವಲಯ | 52.30 | 145.60 | 7.27 | 0.50 | 0.00 | 205.67 |
| 4. | ಹಾಸನ ಪ್ರಸರಣ ವಲಯ | 53.49 | 245.59 | 12.85 | 0.50 | 0.00 | 312.43 |
| 5. | ಬಾಗಲಕೋಟೆ ಪ್ರಸರಣ ವಲಯ | 90.26 | 320.44 | 17.18 | 0.50 | 0.00 | 428.38 |
| 6. | ಕಲಬುರಗಿ ಪ್ರಸರಣ ವಲಯ | 56.94 | 209.32 | 15.71 | 0.50 | 0.00 | 282.47 |
| 7. | ಆಡಳಿತ ಕಛೇರಿಗಳು | 4.75 | 201.43 | 110.93 | 0.00 | 0.00 | 317.11 |
| 8. | ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)ರವರ ಕಛೇರಿ | 0.00 | 229.46 | 0.00 | 0.00 | 1098.17 | 1327.63 |
| | ಒಟ್ಟು | 450.07 | 1906.56 | 208.52 | 3.00 | 1098.17 | 3666.31 |

*ಲೆಕ್ಕ ಶೀರ್ಷಿಕೆ 77.5 ರಡಿ ಪ್ರತಿ ಪ್ರಸರಣ ವಲಯಕ್ಕೆ ರೂ.50,00,000/-ಗಳ ಆಯವ್ಯಯವನ್ನು ಡಿಕಮಿಷನಿಂಗ್ ವೆಚ್ಚ ಮತ್ತು ಆಸ್ತಿಗಳನ್ನು ತೊಡೆದುಹಾಕುವ ಕೆಲಸಗಳಿಗೆ ಹೆಚ್ಚುವರಿಯಾಗಿ ಹಂಚಿಕೆ ಮಾಡಲಾಗಿದ್ದು, ಸದರಿ ಮೊತ್ತದಲ್ಲಿ ಪ್ರಸರಣ ವಲಯ ವ್ಯಾಪ್ತಿಗೆ ಬರುವ ಲೆಕ್ಕ ಘಟಕಗಳಿಗೆ ಸಂಬಂಧಪಟ್ಟ ವಲಯ ಕಛೇರಿಯಿಂದಲೇ ಅಗತ್ಯತೆಯ ಆಧಾರದ ಮೇಲೆ ಹಂಚಿಕೆ ಮಾಡುವುದು.

i) ಆರ್ಥಿಕ ವರ್ಷ 2023-24ನೇ ಸಾಲಿಗೆ ಹಂಚಿಕೆ ಮಾಡಿರುವ ಕಂದಾಯ ಆಯವ್ಯಯದಲ್ಲಿ ಹಿಂದಿನ ವರ್ಷದ ವೆಚ್ಚದಲ್ಲಿ **OSL** ಮಾಡಿರುವುದನ್ನು ಸೇರಿ ಪ್ರಸ್ತುತ ಆರ್ಥಿಕ ವರ್ಷದ ಕೋರಿಕೆಯನುಸಾರ ಆಯವ್ಯಯವನ್ನು ಹಂಚಿಕೆ ಮಾಡಲಾಗಿದೆ.

ii) ಈಗಾಗಲೇ ಆರ್ಥಿಕ ವರ್ಷ 2023-24ನೇ ಸಾಲಿಗೆ ಹಂಚಿಕೆ ಮಾಡಿರುವ ಮೊದಲನೇ ತ್ರೈಮಾಸಿಕದ ಮಧ್ಯಂತರ ಕಂದಾಯ ಆಯವ್ಯಯವನ್ನು ನಿಯತವಾಗಿ ಹಂಚಿಕೆ ಮಾಡುತ್ತಿರುವ ಆಯವ್ಯಯಕ್ಕೆ ಖರ್ಚು ನಮೂದಿಸಿ ಸಕ್ರಮಗೊಳಿಸುವುದು ಹಾಗೂ ಮುಂಬರುವ ವೆಚ್ಚಗಳ ಹುಂಡಿಗಳನ್ನು ನಿಯತವಾಗಿ ಉಪಯೋಗಿಸಲು ಕ್ರಮ ಕೈಗೊಳ್ಳುವುದು.

**2. ಕವಿಪ್ರನಿನಿಯ ಎಲ್ಲಾ ಲೆಕ್ಕ ಘಟಕಗಳಿಗೆ ಕಂದಾಯ ಆಯವ್ಯಯವನ್ನು ಉಪಯೋಗಿಸಲು ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸಲು ಸೂಚಿಸಿದೆ:-**

i) ಎಲ್ಲಾ ಲೆಕ್ಕ ಘಟಕಗಳು ಆರ್ಥಿಕ ವರ್ಷ 2023-24ನೇ ಸಾಲಿನ ಕಂದಾಯ ವೆಚ್ಚವನ್ನು ನಿಯತವಾಗಿ ಹಂಚಿಕೆ ಮಾಡಲಾದ ಆಯವ್ಯಯಕ್ಕೆ ಮಿತಿಗೊಳಿಸುವುದು.

**ii) "ಎಲ್ಲಾ ಲೆಕ್ಕ ಘಟಕಗಳು ಕಂದಾಯ ವೆಚ್ಚಗಳ ಹುಂಡಿಗಳನ್ನು ಪಾವತಿಸುವ ಮುನ್ನ ಸಂಬಂಧಪಟ್ಟ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಕಂದಾಯ ಆಯವ್ಯಯದ ಲಭ್ಯತೆ ಕುರಿತು ಖಚಿತಪಡಿಸಿಕೊಳ್ಳುವುದು. ಕಂದಾಯ ಆಯವ್ಯಯದ ಲಭ್ಯತೆಯಿಲ್ಲದೆ ಯಾವುದೇ ರೀತಿಯಾದ ಕಂದಾಯ ವೆಚ್ಚವನ್ನು ಭರಿಸಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡುತ್ತಾ ಶಿಸ್ತು ಕ್ರಮವನ್ನು ಕೈಗೊಳ್ಳಲು ಶಿಫಾರಸ್ಸು ಮಾಡಲಾಗುವುದು".**

iii) ಎಲ್ಲಾ ಲೆಕ್ಕ ಘಟಕಗಳು, ಆರ್ಥಿಕ ವರ್ಷ 2023-24ನೇ ಸಾಲಿಗೆ ಲೆಕ್ಕ ಶೀರ್ಷಿಕೆವಾರು ಕಂದಾಯ ವೆಚ್ಚದ ವಿವರಣೆಯನ್ನು ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಕಡ್ಡಾಯವಾಗಿ ಆನ್‌ಲೈನ್ ಸಾಫ್ಟ್‌ವೇರ್‌ನಲ್ಲಿ ನಮೂದಿಸುವುದು.

iv) ಆರ್ಥಿಕ ವರ್ಷ 2022-23 ಮತ್ತು ಹಿಂದಿನ ವರ್ಷಗಳಲ್ಲಿನ ಲೆಕ್ಕ ಗುಂಪು 74(ದುರಸ್ತಿ ಮತ್ತು ನಿರ್ವಹಣೆ) ರಡಿ ಪೂರ್ಣಗೊಳ್ಳದೆ ಇರುವ ಕಾಮಗಾರಿಗಳನ್ನು ಆರ್ಥಿಕ ವರ್ಷ 2023-24ನೇ ಸಾಲಿನಲ್ಲಿ ಆದ್ಯತೆಯ ಮೇರೆಗೆ ಕೈಗೊಂಡು ಮುಕ್ತಾಯಗೊಳಿಸುವುದು.

v) ಈ ಕಛೇರಿ ಸುತ್ತೋಲೆ ಸಂಖ್ಯೆ: ಆಸ(ಲೆ ಮತ್ತು ಸಂ)/ಕೆಸಿಪಿ-19/28947/2021-22/5820 ದಿನಾಂಕ:27.03.2023ರಲ್ಲಿ ತಿಳಿಸಿರುವಂತೆ, ಬಂಡವಾಳ ಅಥವಾ ಕಂದಾಯ ವೆಚ್ಚ ಸ್ವಭಾವದಡಿಯ ಕಾಮಗಾರಿಗಳನ್ನು ಸಮರ್ಪಕವಾಗಿ ವರ್ಗೀಕರಿಸುವುದು ಮತ್ತು ಸುತ್ತೋಲೆಯಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು.

vi) ಒಂದೇ ಲೆಕ್ಕ ಗುಂಪಿನಲ್ಲಿ ಮರು ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶವಿದ್ದಲ್ಲಿ, ಲೆಕ್ಕ ಘಟಕಗಳು ಪ್ರಸ್ತಾವನೆಯನ್ನು ಸಂಬಂಧಪಟ್ಟ ಪ್ರಸರಣ ವಲಯಕ್ಕೆ ಸಲ್ಲಿಸುವುದು. ಪ್ರಸರಣ ವಲಯಗಳು ಪ್ರಸ್ತಾವನೆಯನ್ನು ಪರಿಶೀಲಿಸಿ ತಮ್ಮ ಹಂತದಲ್ಲಿಯೇ ಮರು ಹಂಚಿಕೆ ಮಾಡಿಕೊಳ್ಳಬಹುದಾಗಿದೆ.

vii) ಲೆಕ್ಕ ಶೀರ್ಷಿಕೆ 74.2 (ದುರಸ್ತಿ ಮತ್ತು ನಿರ್ವಹಣೆ-ಕಟ್ಟಡಗಳು) ಮತ್ತು 74.3 (ದುರಸ್ತಿ ಮತ್ತು ನಿರ್ವಹಣೆ-ಸಿವಿಲ್ ಕಾಮಗಾರಿಗಳು)ರಡಿಯಲ್ಲಿನ ಮರು ಹಂಚಿಕೆಗೆ ಸಂಬಂಧಪಟ್ಟಂತೆ, ಸದರಿ ಲೆಕ್ಕ ಶೀರ್ಷಿಕೆಗಳ ನಡುವೆ ವಲಯ ವ್ಯಾಪ್ತಿಯಲ್ಲಿಯೇ ಆಯವ್ಯಯದ ಲಭ್ಯತೆಯ ಆಧಾರದ ಮೇರೆಗೆ ಮರು ಹಂಚಿಕೆ ಮಾಡಿಕೊಳ್ಳುವುದು.

**viii) ವಲಯ ವ್ಯಾಪ್ತಿಯಲ್ಲಿನ ಲೆಕ್ಕಘಟಕಗಳ ಹೆಚ್ಚುವರಿ ಆಯವ್ಯಯದ ಪ್ರಸ್ತಾವನೆಯನ್ನು ಅದೇ ಲೆಕ್ಕ ಗುಂಪಿನಲ್ಲಿರುವ ಇತರೆ ಲೆಕ್ಕ ಶೀರ್ಷಿಕೆಯಡಿ ಲಭ್ಯವಿರುವ ಕಂದಾಯ ಆಯವ್ಯಯವನ್ನು ಅಥವಾ ಇತರೆ ಲೆಕ್ಕ ಘಟಕಗಳಲ್ಲಿನ ಅದೇ ಲೆಕ್ಕ ಗುಂಪಿನಲ್ಲಿರುವ ಆಯವ್ಯಯವನ್ನು ಸಮರ್ಪಕವಾಗಿ ಪರಿಶೀಲಿಸಿ ವಲಯ ಮಟ್ಟದಲ್ಲಿಯೇ ಮರು ಹೊಂದಾಣಿಕೆ ಮಾಡಿಕೊಳ್ಳುವುದರೊಂದಿಗೆ ಆಯವ್ಯಯದ ಬಳಕೆಯನ್ನು ಸಮರ್ಪಕವಾಗಿ ನಿಯಂತ್ರಿಸುವುದು. ಆದಾಗ್ಯೂ, ಆಯವ್ಯಯದ ಅಲಭ್ಯತೆಯಿದ್ದಲ್ಲಿ ಲೆಕ್ಕ ಘಟಕಗಳ ಇತರೆ ಲೆಕ್ಕ ಗುಂಪಿನಲ್ಲಿ ಕಂದಾಯ ಆಯವ್ಯಯವನ್ನು ಮರುಹೊಂದಾಣಿಕೆ ಮಾಡಲು ಲೆಕ್ಕ ಶೀರ್ಷಿಕೆವಾರು ಪ್ರಸ್ತಾವನೆಯನ್ನು ಕಡ್ಡಾಯವಾಗಿ ಆಂತರಿಕ ಪರಿಶೋಧನೆಗೊಳಪಡಿಸಿ ನಿಗಮ ಕಛೇರಿಗೆ ಸಲ್ಲಿಸುವುದು.**

ix) ವಲಯ/ವೃತ್ತದ ನಿಯಂತ್ರಣಾಧಿಕಾರಿ/ಉಪಲೆಕ್ಕ ನಿಯಂತ್ರಣಾಧಿಕಾರಿ ರವರುಗಳು ತಮ್ಮ ಕಾರ್ಯವ್ಯಾಪ್ತಿಯ ಲೆಕ್ಕ ಘಟಕಗಳ ಮಾಹೆವಾರು ಕಂದಾಯ ವೆಚ್ಚಗಳನ್ನು, ಹಂಚಿಕೆ ಮಾಡಲಾದ ಕಂದಾಯ ಆಯವ್ಯಯದೊಂದಿಗೆ ಪರಿಶೀಲಿಸಿ ಮತ್ತು ಈ ಆದೇಶದಲ್ಲಿ ತಿಳಿಸಿರುವ ಮಾರ್ಗಸೂಚಿಗಳನ್ನು ಅನುಸರಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.

x) ಲೆಕ್ಕ ಘಟಕವಾರು/ ಲೆಕ್ಕ ಸಂಕೇತವಾರು ಕಂದಾಯ ಆಯವ್ಯಯವನ್ನು ಕವಿಪ್ರನಿನಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುವುದನ್ನು ಗಮನಿಸಿ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಲೆಕ್ಕ ಘಟಕಗಳಿಗೆ ಸೂಚಿಸಲಾಗಿದೆ.

**xi) ಹೆಚ್ಚುವರಿ/ಮರುಹಂಚಿಕೆ ಪ್ರಸ್ತಾವನೆಗಳನ್ನು ಆಯಾ ಲೆಕ್ಕ ಘಟಕಗಳ ಅಧಿಕಾರಿಗಳು ಆಯವ್ಯಯದ ಅವಶ್ಯಕತೆಗನುಗುಣವಾಗಿ 15 ದಿನಗಳ ಮುಂಚಿತವಾಗಿ ನಿಗಮ ಕಛೇರಿಗೆ ತಲುಪಿಸುವುದು.**

**"ಆದೇಶದ ಮೇರೆಗೆ"**

2/8/2023

**ಆರ್ಥಿಕ ಸಲಹೆಗಾರರು(ಲೆ ಮತ್ತು ಸಂ)**
**ಕವಿಪ್ರನಿನಿ**

**ಪ್ರತಿಗಳು:**

1. ಎಲ್ಲಾ ಮುಖ್ಯ ಇಂಜಿನಿಯರ್(ವಿ)/ಎಲ್ಲಾ ಆರ್ಥಿಕ ಸಲಹೆಗಾರರು/ಎಲ್ಲಾ ಪ್ರಧಾನ ವ್ಯವಸ್ಥಾಪಕರು, ಕವಿಪ್ರನಿನಿ.
2. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ಅಧೀಕ್ಷಕ ಇಂಜಿನಿಯರ್(ಕಾಮಗಾರಿ)/ ನಿಯಂತ್ರಣಾಧಿಕಾರಿ/ಉಪ ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ)/(ಆಡಳಿತ), ಕವಿಪ್ರನಿನಿ.
3. ಅಧೀಕ್ಷಕ ಇಂಜಿನಿಯರ್(ವಿ), (ಐಟಿ), ಕವಿಪ್ರನಿನಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಕವಿಪ್ರನಿನಿಯ ಅಂತರ್ಜಾಲದಲ್ಲಿ ಪ್ರಕಟಿಸಲು.
   https://kptcl.karnataka.gov.in/Documents/Finacial/Revenue Budget
4. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/ನಿರ್ದೇಶಕರು(ಹಣಕಾಸು)/ನಿರ್ದೇಶಕರು(ಆ ಮತ್ತು ಮಾ.ಸಂ), ಕವಿಪ್ರನಿನಿ ರವರಿಗೆ ರವಾನಿಸುತ್ತಾ, ವಿಷಯವನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/ನಿರ್ದೇಶಕರು(ಹಣಕಾಸು)/ನಿರ್ದೇಶಕರು(ಆ ಮತ್ತು ಮಾ.ಸಂ), ಕವಿಪ್ರನಿನಿ ರವರ ಆದ್ಯ ಗಮನಕ್ಕೆ ತರಲು ಕೋರಿದೆ.
5. ಕಾರ್ಯನಿರ್ವಾಹಕ ಇಂಜಿನಿಯರ್(ವಿ)/(ಕಾಮಗಾರಿ)/ಉಪ ಲೆಕ್ಕ ನಿಯಂತ್ರಣಾಧಿಕಾರಿ, ಕವಿಪ್ರನಿನಿ.
6. ಎಲ್ಲಾ ಲೆಕ್ಕಾಧಿಕಾರಿಗಳು, ಕವಿಪ್ರನಿನಿ.

9019914294